ಕರ್ನಾಟಕ ಸರ್ಕಾರ
Govt of Karnataka
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ– 587103
OFFICE OF THE DEPUTY COMMISSIONER, BAGALKOT DISTRICT, BAGALKOT- 587103
Ph: 08354-235091 Fax: 08354-235096 E-mail:deo.bagalkot@gmail.com

ಸಂಖ್ಯೆ: ಜಿಅಬಾ/ಸಿಬ್ಬಂದಿ–1/ಸಿ.ಆರ್–06/2019–20 ದಿನಾಂಕ: 17–08–2019

**ಅಧಿಕೃತ ಜ್ಞಾಪನ**

ವಿಷಯ: ಬಾಗಲಕೋಟೆ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಕುರಿತು –ತಾತ್ಕಾಲಿಕ ಪರಿಶೀಲನಾ ಪಟ್ಟಿ ಪ್ರಕಟಿಸುವ ಕುರಿತು.
ಉಲ್ಲೇಖ: ಈ ಕಾರ್ಯಾಲಯದ ಅಧಿಸೂಚನೆ ಸಮಸಂಖ್ಯೆ ದಿನಾಂಕ:04–06–2019.

************

ಬಾಗಲಕೋಟೆ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮಲೆಕ್ಕಾಧಿಕಾರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಕುರಿತು ಉಲ್ಲೇಖದಡಿ ಅಧಿಸೂಚನೆ ಹೊರಡಿಸಲಾಗಿದೆ. ಅರ್ಹ ಅಭ್ಯರ್ಥಿಗಳ ನೇಮಕಾತಿ ಕುರಿತು ತಯಾರಿಸಲಾದ ಅರ್ಹ ಅಭ್ಯರ್ಥಿಗಳ ಪಟ್ಟಿ ಮತ್ತು ಪರಿಶೀಲನಾ ಪಟ್ಟಿ [1:5] ಮತ್ತು ತಿರಸ್ಕೃತ ಅಭ್ಯರ್ಥಿಗಳ ಪಟ್ಟಿಯನ್ನು ಜಿಲ್ಲಾ ವೆಬ್‌ಸೈಟ್ http://bagalkot-va.kar.nic.in ರಲ್ಲಿ ನೋಡಬಹುದಾಗಿದೆ. ಸದರಿ ಅರ್ಹ ಅಭ್ಯರ್ಥಿಗಳ ಪಟ್ಟಿ ಹಾಗೂ ಪರಿಶೀಲನಾ ಪಟ್ಟಿ [1:5] ಮತ್ತು ತಿರಸ್ಕೃತ ಅಭ್ಯರ್ಥಿಗಳ ಪಟ್ಟಿಗೆ ಆಕ್ಷೇಪಣೆ / ತಕರಾರುಗಳೇನಾದರೂ ಇದ್ದಲ್ಲಿ, ದಾಖಲೆಗಳೊಂದಿಗೆ ದಿನಾಂಕ:29/08/2019 ರೊಳಗಾಗಿ ನೇರವಾಗಿ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಆವಕ ಶಾಖೆಯಲ್ಲಿ ಸಲ್ಲಿಸಬಹುದಾಗಿದೆ.

ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಅರ್ಜಿ ಶುಲ್ಕ ಭರಣಾ ಮಾಡಿದವರನ್ನು ಮಾತ್ರ ಪರಿಗಣಿಸಲಾಗಿದೆ. ಒಂದು ವೇಳೆ ಅಭ್ಯರ್ಥಿಗಳು ಶುಲ್ಕ ಭರಣ ಮಾಡಿದ್ದಾಗ್ಯೂ ಅರ್ಹ ಅಭ್ಯರ್ಥಿ ಪಟ್ಟಿಯಲ್ಲಿ ಹೆಸರು ಬಿಟ್ಟು ಹೋದಲ್ಲಿ, ಮೂಲ ಚಲನ ಪ್ರತಿಯೊಂದಿಗೆ ಆಕ್ಷೇಪಣೆ ಸಲ್ಲಿಸುವುದು.

ಅವಧಿ ಮೀರಿದ ಯಾವುದೇ ಆಕ್ಷೇಪಣೆ / ತಕರಾರು ಪರಿಗಣಿಸಲಾಗುವುದಿಲ್ಲ. ಆಕ್ಷೇಪಣೆ / ತಕರಾರು ಸಲ್ಲಿಸಿದ ಅಭ್ಯರ್ಥಿಯು ತನ್ನ ಪೂರ್ತಿ ವಿಳಾಸ ದೂರವಾಣಿ/ ಮೊಬೈಲ್ ಸಂಖ್ಯೆ:ಇ–ಮೇಲ್ ಐಡಿ [ಹೊಂದಿದ್ದಲ್ಲಿ] ವಿವರವನ್ನು ತಪ್ಪದೇ ಸಲ್ಲಿಸಬೇಕು. ನಿಗದಿತ ಅವಧಿಯೊಳಗೆ ಈ ಕಾರ್ಯಾಲಯಕ್ಕೆ ಸ್ವೀಕೃತವಾಗದೇ ಇರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸದರಿ ಪರಿಶೀಲನಾ ಪಟ್ಟಿಯ [1:5] ಅರ್ಹ ಅಭ್ಯರ್ಥಿಗಳು **ದಿನಾಂಕ: 4–09–2019 ರಂದು ಬೆಳಿಗ್ಗೆ 10–00 ಘಂಟೆಗೆ ಜಗಜೀವನರಾಮ ಸಭಾ ಭವನ, ತಹಶೀಲ್ದಾರ ಕಛೇರಿ ಹಿಂದುಗಡೆ, ಪೋಲೀಸ್ ಪ್ಯಾಲೇಸ್ ಹತ್ತಿರ ನವನಗರ, ಬಾಗಲಕೋಟೆಯಲ್ಲಿ** ಖುದ್ದಾಗಿ ಈ ಕೆಳಕಂಡ ಮೂಲ ಹಾಗೂ ದೃಢೀಕೃತ ದಾಖಲೆಗಳೊಂದಿಗೆ ತಪ್ಪದೇ ಹಾಜರಿದ್ದು, ತಮ್ಮ ಹಾಜರಾತಿಯನ್ನು ದಾಖಲಿಸಬೇಕು. **ದಾಖಲೆ ಪರಿಶೀಲನೆಗೆ ನಿಗದಿಪಡಿಸಿದ ದಿನಾಂಕದಂದು ಯಾವುದೇ ಕಾರಣಕ್ಕೆ ಅಭ್ಯರ್ಥಿಯು ಗೈರ ಹಾಜರಾದಲ್ಲಿ ನಂತರದಲ್ಲಿ ಅವರ ದಾಖಲೆ ಪರಿಶೀಲನೆಗೆ ಪರಿಗಣಿಸಲಾಗುವುದಿಲ್ಲ.** ಈ ಪರಿಶೀಲನಾ ಪಟ್ಟಿಯಲ್ಲಿ ಕಾಣಿಸಿದ ಅಭ್ಯರ್ಥಿಗಳಿಗೆ ಈ ಕಛೇರಿಯಿಂದ ತಿಳುವಳಿಕೆ ಪತ್ರ ಸ್ವೀಕೃತವಾಗದಿದ್ದರೂ ಸಹ ಈ ಮೇಲಿನ ದಿನಾಂಕದಂದು ಪರಿಶೀಲನೆಗೆ ಹಾಜರಾಗತಕ್ಕದ್ದು. ಪರಿಶೀಲನಾ ಸಮಯದಲ್ಲಿ ಬರುವ ಅಭ್ಯರ್ಥಿಗಳಿಗೆ ಈ ಕಾರ್ಯಾಲಯದಿಂದ ಪ್ರಯಾಣ ಭತ್ಯೆ ಇತ್ಯಾದಿ ನೀಡಲಾಗುವುದಿಲ್ಲ. ಪರಿಶೀಲನಾ ಪಟ್ಟಿಯಲ್ಲಿ ಕಾಣಿಸಿದ ಅಭ್ಯರ್ಥಿಗಳು ದಾಖಲೆಗಳ ಪರಿಶೀಲನೆ ಬಗ್ಗೆ ಮಾತ್ರ ಸೀಮಿತವಾಗಿದ್ದು, ಅರ್ಹ ಅಭ್ಯರ್ಥಿಗಳನ್ನು ಮಾತ್ರ ನೇಮಕಾತಿಗೆ ಪರಿಗಣಿಸಲಾಗುವುದು. ಒಂದು ವೇಳೆ ಆಯಾ ವರ್ಗಗಳಲ್ಲಿ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ನಂತರದ ಅಭ್ಯರ್ಥಿಗಳ ಪರಿಶೀಲನಾ ಪಟ್ಟಿ ಪ್ರಕಟಿಸಲಾಗುವುದು.

**ಪರಿಶೀಲನಾ ಸಮಯದಲ್ಲಿ ಅಭ್ಯರ್ಥಿಗಳು ಹಾಜರಪಡಿಸಬೇಕಾದ ದಾಖಲೆಗಳು ಈ ಕೆಳಗಿನಂತಿವೆ:**

1. ಅಭ್ಯರ್ಥಿಯ ಇತ್ತೀಚಿನ 2 ಪಾಸಪೋರ್ಟ ಅಳತೆಯ ಭಾವಚಿತ್ರಗಳು.
2. ದ್ವಿತೀಯ PUC ಪರೀಕ್ಷೆ ಅಥವಾ CBSC / ICSE ನಡೆಸುವ 12 ನೇ ತರಗತಿಯ ಮೂಲ ಅಂಕಪಟ್ಟಿ. [ನೇಮಕಾತಿ ಅಧಿಸೂಚನೆಯಲ್ಲಿ ತಿಳಿಸಿರುವಂತೆ]
3. ವಯಸ್ಸಿನ ಬಗ್ಗೆ ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಅಥವಾ ಜನನ ಪ್ರಮಾಣ ಪತ್ರದ ಮೂಲ ಪ್ರತಿ.

4. ಮೀಸಲಾತಿ ಕೋರಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ–1 ಹಾಗೂ ಪ್ರವರ್ಗ–2ಎ,2ಬಿ,3ಎ,3ಬಿ ನೇದ್ದವರ ದಿ:04–07–2019 ಕ್ಕೆ ಮೊದಲು ತಹಶೀಲ್ದಾರರಿಂದ ಪಡೆದ ಪ್ರಮಾಣ ಪತ್ರ.
5. ಗಣಕಯಂತ್ರಗಳ ಬಗ್ಗೆ ತಿಳುವಳಿಕೆ ಇದ್ದು, ಬೇಸಿಕ್ ಕಂಪ್ಯೂಟರ್ ಜ್ಞಾನ ಹೊಂದಿರುವ ಬಗ್ಗೆ ಪ್ರಮಾಣ ಪತ್ರ.
6. ನಿಗದಿಪಡಿಸಿದ ಅರ್ಜಿ ಶುಲ್ಕ ಬ್ಯಾಂಕ್‌ಗೆ ಜಮಾ ಮಾಡಿದ ಚಲನ ಪ್ರತಿ
7. ಸೇವೆಯಲ್ಲಿರುವ ಅಭ್ಯರ್ಥಿಗಳು ಹುದ್ದೆಗೆ ಅರ್ಜಿ ಸಲ್ಲಿಸಿರುವ ಬಗ್ಗೆ ಸಂಬಂಧಿಸಿದ ನೇಮಕಾತಿ ಪ್ರಾಧಿಕಾರದಿಂದ ಪಡೆದ ನಿರಾಕ್ಷೇಪಣಾ ಪತ್ರ [NO OBJECTION CERTIFICATE]
8. ಯೋಜನಾ ನಿರಾಶ್ರಿತರ ಕೋಟಾದಡಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ದಿ:04–07–2019 ಕ್ಕೆ ಮೊದಲು ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ.
9. ಗ್ರಾಮೀಣ ಮೀಸಲಾತಿ ಕೋರಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ದಿ:04–07–2019 ಕ್ಕೆ ಮೊದಲು ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ.
10. ಕನ್ನಡ ಮಾಧ್ಯಮದಲ್ಲಿ ಕೋರಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ದಿ:04–07–2019 ಕ್ಕೆ ಮೊದಲು ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ.
11. ಮಾಜಿ ಸೈನಿಕರ ಕೋಟಾದಡಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಸೈನಿಕ ಸೇವೆಯಿಂದ ಮುಕ್ತಿ ಹೊಂದಿದ ಬಗ್ಗೆ ಪ್ರಮಾಣ ಪತ್ರ.
12. ಅಂಗವಿಕಲ ಕೋಟಾದಡಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಅಂಗವಿಕಲತೆ ಹೊಂದಿದ ಬಗ್ಗೆ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರ
13. ಜೀತಮುಕ್ತಿ ಹೊಂದಿದ ಅಭ್ಯರ್ಥಿ ವಯಸ್ಸಿನ ಸಡಲಿಕೆ ಬಯಸಿದಲ್ಲಿ, ಸಕ್ಷಮ ಪ್ರಾಧಿಕಾರದಿಂದ ಪಡೆದ ಮೂಲ ಪ್ರಮಾಣ ಪತ್ರ.

17/8/19

ಅಧ್ಯಕ್ಷರು,
ಗ್ರಾಮ ಲೆಕ್ಕಿಗರ ನೇರ ನೇಮಕಾತಿ ಆಯ್ಕೆ ಪ್ರಾಧಿಕಾರ
ಹಾಗೂ ಜಿಲ್ಲಾಧಿಕಾರಿಗಳು, ಬಾಗಲಕೋಟೆ.